ಅಸಲು ದಾವೆ ಸಂಖ್ಯೆ - 257/2016
ಪಿಡಬ್ಲ್ಯು - 01
ದಿನಾಂಕಃ 07.07.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ವಿ ಬಿ ಟಿ ವಕೀಲರಿಂದ**

ದಾವಾ ಆಸ್ತಿ ಈಗ ಪ್ರತಿವಾದಿಯರಾದ ಬಸನಗೌಡ, ಸಣ್ಣಗೌಡ, ಶಾಂತನಗೌಡ, ಬಾಪುಗೌಡ ಇವರ ಹೆಸರಿನಲ್ಲಿರುತ್ತದೆ. ಅವರ ಹೆಸರಿನಲ್ಲಿ 02 ಎಕರೆ 12 ಗುಂಟೆ ಜಮೀನು ಇರುತ್ತದೆ. ಪ್ರತಿವಾದಿಯರ ಹೆಸರು ದಾಖಲಾಗುವ ಮುಂಚೆ ದಾವಾ ಆಸ್ತಿ ಸಣ್ಣನಿಂಗಪ್ಪ ಮುರಿಗೆಪ್ಪ ಮಳೆಪ್ಪನವರ ಇತನ ಹೆಸರಿನಲ್ಲಿತ್ತು. 1992 ರಲ್ಲಿ ಸಣ್ಣನಿಂಗಪ್ಪನ ಹೆಸರಿನಲ್ಲಿತ್ತು. 1999 ರಿಂದ ಪ್ರತಿವಾದಿಯರ ಹೆಸರು ದಾಖಲಾಗಿರುತ್ತದೆ. ಯಾವ ಆಧಾರದ ಮೇಲೆ ದಾವಾ ಆಸ್ತಿಗೆ ಪ್ರತಿವಾದಿಯರ ಹೆಸರು ದಾಖಲಾಗಿರುತ್ತದೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಹೆಸರು ದಾವಾ ಆಸ್ತಿಯಲ್ಲಿ ದಾಖಲಾಗಿರುವುದು ನನಗೆ 1999 ರಲ್ಲಿ ಗೊತ್ತಾಗಿರುತ್ತದೆ. 1999 ರಲ್ಲಿ ಗೊತ್ತಾದ ನಂತರ ದಾವೆ ಮಾಡಿಲ್ಲ, ಏಕೆಂದರೆ ನನ್ನ ತಂದೆ ಮುಂಚೆಯೇ ದಾವೆ ಹೂಡಿದ್ದರು. ಅವರು ಎಲ್ಲಿ ಕೇಸು ಮಾಡಿದ್ದರು ಎಂದರೆ ತಹಶೀಲ್ದಾರ ಕಚೇರಿಯಲ್ಲಿ ಪ್ರತಿವಾದಿಯರ ಹೆಸರು ಕಡಿಮೆ ಮಾಡಲು ಅರ್ಜಿ ಕೊಟ್ಟಿದ್ದರು. ತಹಶೀಲ್ದಾರ ಇವರು ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಪರಿಹಾರ ಕೊಡುವಂತೆ ಸೂಚಿಸಿದರು. ದಾವಾ ಆಸ್ತಿ ಸರ್ವೆ ನಂ.57/6ಅ ವಿಸ್ತೀರ್ಣ 04 ಎಕರೆ 25 ಗುಂಟೆ ಇರುತ್ತದೆ. 04 ಎಕರೆ 25 ಗುಂಟೆ ಪೈಕಿ ನಮ್ಮ ದೊಡ್ಡಪ್ಪ ನಾಗಪ್ಪನ ಹೆಸರಿನಲ್ಲಿ 02 ಎಕರೆ 13 ಗುಂಟೆ ಇರುತ್ತದೆ. ಇನ್ನುಳಿದ 02 ಎಕರೆ 12 ಗುಂಟೆ ಪ್ರತಿವಾದಿಯರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ 1998 ರವರೆಗೆ ನನ್ನ ಅಜ್ಜ ಸಣ್ಣನಿಂಗಪ್ಪನ ಹೆಸರು ದಾವಾ ಆಸ್ತಿಯಲ್ಲಿತ್ತು ಅಂತಾ ನುಡಿಯುತ್ತಾರೆ. ನಾಗಪ್ಪನ ಹೆಸರು ಮತ್ತು ಪ್ರತಿವಾದಿಯರ ಹೆಸರು ದಾಖಲಾಗುವ ಮುಂಚೆ ಸರ್ವೆ ನಂ.57/6ಅ ನನ್ನ ಅಜ್ಜನ ಹೆಸರಿನಲ್ಲಿತ್ತು. ಮಳೆಪ್ಪ ಮುರಿಗೆಪ್ಪ ಮಳೆಯಪ್ಪನವರ ಮತ್ತು ಸಣ್ಣನಿಂಗಪ್ಪ ಮುರಿಗೆಪ್ಪ ಮಳೆಯಪ್ಪನವರ ಇಬ್ಬರು ಸೇರಿ ದಿನಾಂಕಃ 01.06.1939 ರಂದು ಸರ್ವೆ ನಂ.57/6ಅ ಜಮೀನನ್ನು ಖರೀದಿ ಹಿಡಿದಿರುತ್ತಾರೆ. ದಿನಾಂಕಃ 25.06.1947 ರಂದು ಮಳೆಪ್ಪ ಮುರಿಗೆಪ್ಪ ಮಳೆಯಪ್ಪನವರ ಮತ್ತು ಸಣ್ಣನಿಂಗಪ್ಪ ಮುರಿಗೆಪ್ಪ ಮಳೆಯಪ್ಪನವರ ಇಬ್ಬರು ಸೇರಿ ವಾಟ್ನಿ ಮಾಡಿಕೊಂಡಿರುತ್ತಾರೆ. ಈ ಆಸ್ತಿ ಕುರಿತು ಯಾರ ಯಾರ ನಡುವೆ ಭೂ ನ್ಯಾಯ ಮಂಡಳಿಯಲ್ಲಿ ವ್ಯಾಜ್ಯ ಇತ್ತು ನನಗೆ ಗೊತ್ತಿಲ್ಲ. ಪ್ರತಿವಾದಿಯರ ಹೆಸರು ದಾಖಲಾಗುವ ಮುಂಚೆ ಅವರ ತಂದೆ ಹೆಸರು ದಾವಾ ಆಸ್ತಿಗೆ ಹೇಗೆ ದಾಖಲಾಯಿತು ಎಂದರೆ ಸಂಗನಗೌಡನ ತಮ್ಮ ಬಾಸ್ಕರಗೌಡ

ತಹಶೀಲ್ದಾರ ಕಚೇರಿಯಲ್ಲಿ ತಲಾಟಿ (ಗ್ರಾಮಲೆಕ್ಕಾಧಿಕಾರಿ) ಕೈ ಕೆಳಗೆ ಕೆಲಸ ಮಾಡುತ್ತಿದ್ದ, ಆತ ದಾಖಲೆಗಳನ್ನು ತಿದ್ದಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಸಂಗನಗೌಡನ ಹೆಸರನ್ನು ದಾವಾ ಆಸ್ತಿಗೆ ದಾಖಲಿಸಿರುತ್ತಾನೆ ಅಂತಾ ಕೇಳಿರುತ್ತೇನೆ. ಸದರಿ ಬಾಸ್ಕರಗೌಡ 1998 ರಲ್ಲಿ ಖೊಟ್ಟಿಯಾಗಿ ಹೆಸರು ದಾಖಲು ಮಾಡಿಸಿರುತ್ತಾನೆ. ಆಗ ನನ್ನ ತಂದೆ ಅಥವಾ ನನ್ನ ಅಜ್ಜ ಪ್ರಶ್ನೆ ಮಾಡಿದ್ದರಾ ಎಂದರೆ ತಹಶೀಲ್ದಾರ ಕಚೇರಿಯಲ್ಲಿ ಅವರ ಹೆಸರು ಕಡಿಮೆ ಮಾಡಿ ತನ್ನ ಹೆಸರು ದಾಖಲಿಸುವಂತೆ ಅರ್ಜಿ ಕೊಟ್ಟಿದ್ದ. ಸದರಿ ಅರ್ಜಿಯ ದೃಡಿಕೃತ ನಕಲನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. 1998-99 ರಲ್ಲಿ ನಾವು ಅಥವಾ ನನ್ನ ತಂದೆ ಅಥವಾ ನನ್ನ ಅಜ್ಜ ಆ ರೀತಿ ಯಾವುದೇ ಪ್ರಯತ್ನ ಮಾಡಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1997-98 ರಲ್ಲಿ ಅಥವಾ ಅದಕ್ಕಿಂತ ಮುಂಚೆ ದಾವಾ ಆಸ್ತಿ ನನ್ನ ಅಜ್ಜನ ಹೆಸರಿನಲ್ಲಿತ್ತು ಅಂತಾ ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. 1998-99 ರಲ್ಲಿ ನನಗೆ 16 ವಯಸ್ಸು ಇತ್ತು. ದಾವಾ ಆಸ್ತಿ ಪೈಕಿ ಉಳಿದ 02 ಎಕರೆ 13 ಗುಂಟೆ ಜಮೀನಿಗೆ ನಾಗಪ್ಪನ ಹೆಸರಿಗೆ ಹೇಗೆ ದಾಖಲಾಯಿತು ಎಂದರೆ ವಾಟ್ನಿ ಆಧಾದ ಮೇಲೆ ಅವರ ತಂದೆ ಹೆಸರು ದಾಖಲಾಗಿತ್ತು, ಅವರ ತಂದೆ ಹೆಸರು ಕಡಿಮೆ ಆಗಿ ನಾಗಪ್ಪನ ಹೆಸರು ದಾಖಲಾಗಿರುತ್ತದೆ. ನಾಗಪ್ಪ ಜೀವಂತ ಇರುತ್ತಾನೆ. ನನ್ನ ತಂದೆಗೆ ವಾಟ್ನಿ ಮೂಲಕ ದಾವಾ ಆಸ್ತಿ ಬಂದಿರುತ್ತದೆ ಅಂತಾ ತೋರಿಸಲು ವಾಟ್ನಿ ಪತ್ರ ಹಾಜರುಪಡಿಸಿದ್ದೇನೆ. ನಮ್ಮ ಮತ್ತು ಪ್ರತಿವಾದಿಯರ ನಡುವೆ 1998 ರಿಂದಲೇ ವ್ಯಾಜ್ಯ ಇರುತ್ತದೆ. ಯಾವ ತಾರೀಖಿನಿಂದ ತಂಟೆಯಾಗಿರುತ್ತದೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ 2016 ರಲ್ಲಿ ಎಕರೆಗೆ ಎಷ್ಟು ಕಿಮ್ಮತ್ತು ಆಗುತ್ತಿತ್ತು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಮೂಲತಃ ಬಸನಗೌಡನ ತಂದೆ 1974 ರಿಂದ ರೈತಾಪಿ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದ ಎಂದರೆ ಸರಿಯಲ್ಲ. ರೈತಾಪಿ ಹಕ್ಕಿನಿಂದ ರೈತಾಪಿ ಹಕ್ಕು ಮಂಜೂರಾಗಿ ಪ್ರತಿವಾದಿಯರಿಗೆ ದಾವಾ ಆಸ್ತಿ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೂಲತಃ ವಾಸುದೇವಾಚಾರ್ಯ ನವರತ್ನ, ಸೀತಾಬಾಯಿ ನವರತ್ನ ಮತ್ತು ಸಣ್ಣನಿಂಗಪ್ಪ ಇವರ ಮಾಲ್ಕಿ ಆಸ್ತಿ ಇತ್ತು ಮತ್ತು ಟೆನೆಂಟ್ ಕಾಯ್ದೆ  ಮೇಲೆ ಪ್ರತಿವಾದಿಯರ ಕುಟುಂಬಕ್ಕೆ ದಾವಾ ಆಸ್ತಿ ಬಂದಿರುತ್ತದೆ ಎಂದರೆ ಸರಿಯಲ್ಲ. ಕಾರಣ ನಾವಾಗಲೀ, ನನ್ನ ತಂದೆಯಾಗಲೀ, ನನ್ನ ಅಜ್ಜಆಗಲೀ ದಾವಾ ಆಸ್ತಿಗೆ ಮಾಲೀಕರಲ್ಲ, ಕಬ್ಜೆದಾರರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರೇ ದಾವಾ ಆಸ್ತಿಯ ಪ್ರತ್ಯಕ್ಷ ಕಬ್ಜಾ ವಹಿವಾಟಿಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾವಾಗಲೀ, ನಮ್ಮ ಹಿರಿಯರಾಗಲೀ 1976 ನೇ ಇಸ್ವಿಯಿಂದ ದಾವಾ ಆಸ್ತಿಯ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ

ಸರಿಯಲ್ಲ. ದಾವಾ ಆಸ್ತಿ ಎಕರೆಗೆ 6-8 ಲಕ್ಷ ರೂಪಾಯಿ ಕಿಮ್ಮತ್ತು ಇತ್ತು ಎಂದರೆ ಸರಿಯಲ್ಲ. ನಾವಾಗಲೀ, ನಮ್ಮ ಹಿರಿಯರಾಗಲೀ ಭೂ ನ್ಯಾಯ ಮಂಡಳಿಯ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ವಿಸ್ತೀರ್ಣ 02 ಎಕರೆ 13 ಗಂಟೆಯ ಚಕಬಂದಿ ಹೇಳಲು ಬರುತ್ತದೆ, ಪೂರ್ವಕ್ಕೆ ಗುರುನಾಥಗೌಡ ವೀ. ಮಾಳಮ್ಮನವರ, ಪಶ್ಚಿಮಕ್ಕೆ ಮಂಜುನಾಥ ನಿಂಗಪ್ಪ ಕಡ್ಡಿಯವರ, ಉತ್ತರಕ್ಕೆ ನಾಗಪ್ಪ ಮಳೆಯಪ್ಪನವರ, ದಕ್ಷಿಣಕ್ಕೆ ಚನ್ನಬಸನಗೌಡ ರುದ್ರಗೌಡ ನೀರಲಗಿ ಇವರ ಜಮೀನು ಇರುತ್ತದೆ. ನಾಗಪ್ಪನ ಹೆಸರಿನಲ್ಲಿರುವ 02 ಎಕರೆ 12 ಗುಂಟೆ ಜಮೀನಿನ ಪೂರ್ವಕ್ಕೆ ಗುರುನಾಥಗೌಡ ವೀ. ಮಾಳಮ್ಮನವರ, ಪಶ್ಚಿಮಕ್ಕೆ ನಿಂಗಪ್ಪ ಕಡ್ಡಿಯವರ, ಉತ್ತರಕ್ಕೆ ಗೊತ್ತಿಲ್ಲ, ದಕ್ಷಿಣಕ್ಕೆ ರುದ್ರಗೌಡ ನೀರಲಗಿ ಇವರ ಜಮೀನು ಇರುತ್ತದೆ. ಸುಳ್ಳು ಚಕಬಂದಿ ತೋರಿಸಿ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ತಂದೆಗೆ ವಾಟ್ನಿ ಪ್ರಕಾರ ಬಂದಿಲ್ಲ, ನಮಗೆ ದಾವಾ ಆಸ್ತಿ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1939 ರಿಂದ ಮಾಲೀಕರು ಮತ್ತು ದಾವಾ ಆಸ್ತಿ ಕಬ್ಜೆಯಲ್ಲಿರುತ್ತೇವೆ ಅಂತಾ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.